ಕೇವಲ ನನ್ನ ಬೇಡಿಕೆ ಪಟ್ಟಿಯ ಒಂದಂಶ ಮಾತ್ರ. ಅಮ್ಮನನ್ನು ಕಟ್ಟಿ ಹಾಕಿದ್ದ ಆರ್ಥಿಕ ಅವಲಂಬನೆ ನನಗಿಲ್ಲ. ನನ್ನ ಸಾಂಗತ್ಯದ ಅವಶ್ಯಕತೆಗಳೇ ಬೇರೆ ಇವೆ. ಎಷ್ಟು ಬಾರಿ, ನನ್ನ ರವಿಯ ನಡುವೆ ಮಾತನಾಡಲೂ ಏನೂ ಇರದೆ ಮೌನ ಆವರಿಸಿಬಿಡುತ್ತದೆ. ನಾನು ಹೇಳುವ ಎಷ್ಟೋ ಅವನಿಗರ್ಥವಾಗುವುದಿಲ್ಲ, ಆಸಕ್ತಿಯೂ ಇಲ್ಲ. ಅವನ ಸೋಮಾರಿ ಕಟ್ಟೆಯ ಸಮಾಚಾರಗಳ ನಾನು ಎಷ್ಟೆಂದು ಕೇಳಲಿ? ಇವನ 'ಒಳ್ಳೆಯತನವೂ' ಬೋರು ಹೊಡೆಸುವಷ್ಟು ಬೇಜಾರಾಗಿದೆ. ಇವನ ಪ್ರೀತಿಯಲ್ಲೂ ಸೋನೆಮಳೆಯ ಏಕತಾನತೆ! ಎಂಟು ವರ್ಷಗಳ ನಮ್ಮ ಸಂಬಂಧದಲ್ಲಿ ಅವ ಎಂದೂ 'ನಿನ್ನ ಪ್ರೀತಿಸುತ್ತೇನೆ, ನೀನಿಲ್ಲದೆ ಬದುಕಿರಲಾರೆ...' ಎಂದು ಒಮ್ಮೆಯೂ ಹೇಳಿದ್ದಿಲ್ಲ. ಎಷ್ಟಾದರೂ ನಾವು ನಾಳೆ ಗಂಡ– ಹೆಂಡಿರಾಗುವವರು ಎಂದು ನಿಶ್ಚಿತಾರ್ಥದ ನಿಶ್ಚಿಂತೆಯಲ್ಲಿದ್ದಾನೆ. ಪ್ರೀತಿಯತ್ತಲೂ ಎಂದೂ ದುಡಿದದ್ದಿಲ್ಲ, ಉತ್ಕಟತೆಯ ಶಿಖರವೇರಿದ್ದಿಲ್ಲ. ನನಗಾಗಿ 'ಕುತುಬ್'ನಿಂದ ಹಾರುವುದಾಗಲೀ, ಆಕಾಶ ಪುಷ್ಪವ ತರೆದು ತರುವುದಾಗಲೀ, ಬರೀ ಮಾತಿಗಾದರೂ ಹೇಳಿದ್ದಿಲ್ಲ. ಕಡೆಗೆ ನಮ್ಮ ಎಂಟು ವರ್ಷಗಳ ಸಂಬಂಧದಲ್ಲಿ ಒಮ್ಮೆ ಕೂಡ ಕೈ ಹಿಡಿದು ಅಮುಕಿದ್ದಿಲ್ಲ. ಬರಸೆಳೆದು ಚುಂಬಿಸಿದ್ದಿಲ್ಲ. ಅವೆಲ್ಲವೂ ಮದುವೆಯ ಮರ್ಯಾದೆಯ ಹೊಸ್ತಿಲಿನಲ್ಲಿ ಮಾತ್ರ! ರವಿ ಪ್ರೀತಿಯಲ್ಲೂ ಸಾಹಸಿಯಲ್ಲ, ಪ್ರೀತಿಯಲ್ಲೂ ಗೆದ್ದವನಲ್ಲ. ಅವನ ಮೌನವನ್ನು ಸಂಯಮವೆಂದು ನನ್ನ ಹೃದಯ ಒಪ್ಪಲು ಏಕೋ ಸಿದ್ಧವಿಲ್ಲ. ನಾಳೆ ಮದುವೆ ಆದ ಮೊದಲ ರಾತ್ರಿಯೇ ಯಾವುದೇ ಪೀಠಿಕೆ ಇಲ್ಲದೆ ಹಾಸಿಗೆಗೇರುತ್ತಾನೆ ಅನ್ನುವುದೂ ಸುಳ್ಳಲ್ಲ. ಕೆಲವೊಮ್ಮೆ ಕೆಲವರ ವ್ಯಕ್ತಿತ್ವಗಳು ಅವರು ಹೇಳದೆಯೇ ಅವರ ವರ್ತನೆಗಳಲ್ಲಿ ವ್ಯಕ್ತವಾಗಿರುತ್ತವೆ. ಅವನ ಚೀಲದಲ್ಲಿ ಆಗಾಗ್ಗೆ 'ರತಿ ವಿಜ್ಞಾನ' ಇತ್ಯಾದಿ ಸೆಕ್ಸ್ ಪುಸ್ತಕಗಳ ನೋಡಿದ್ದೇನೆ. ಅವುಗಳಿಗೆ ಬೈಂಡ್ ಬೇರೆ ಹಾಕಿ ಕದ್ದು ಓದುತ್ತಾನೆ. ರವಿಯದು ಪ್ರೀತಿಯಲ್ಲೂ ಸಾಹಸವಿಲ್ಲ. ಮದುವೆಯ ಸುರಕ್ಷಿತ ಅಖಾಡದಲ್ಲಿ ಸೋಲಿಲ್ಲ ಎಂಬ ಗ್ಯಾರಂಟಿಯಲ್ಲಿ ಕುಸ್ತಿಗಿಳಿಯಬಲ್ಲ.

ಆದರೆ ಈ ಪ್ರೀತಿಯನ್ನು, ವರ್ಷಗಳ ಸಂಬಂಧವನ್ನು ನಾನು ಹೇಗೆ ಕತ್ತರಿಸಲಿ? ಎಂದೋ ಎದೆ– ಮೆದುಳುಗಳಿನ್ನೂ ಅರಳಿರದ ದಿನಗಳಲ್ಲಿ ಕೊಟ್ಟ ಮಾತಿಗೆ ಇಂದು ಉರುಳು ಹಾಕಿಕೊಳ್ಳುವುದೆ? ನಾನು ನಾಳೆಗಳಲ್ಲಿ ಬದುಕುವವಳು. ನಿನ್ನೆಗಳ ನೆರಳನ್ನು ಕತ್ತರಿಸಿ ಹೋಗಬಲ್ಲೆನೆ? ನನಗವನು ಓದಿಲ್ಲ ಅನ್ನುವುದಕ್ಕಿಂತ, ಅವ ಪ್ರಯತ್ನಿಸಲೇ ಇಲ್ಲ ಎಂಬ ವ್ಯಥೆ. ಅವ ಪ್ರಯತ್ನದಲ್ಲಿ ಸೋತಿದ್ದರೂ ಇಷ್ಟು ಅಸಮಾಧಾನವಾಗುತ್ತಿರಲಿಲ್ಲ. ಇಲ್ಲದ್ದನ್ನು ಒಲ್ಲೆನೆನ್ನುವ, ಆಗದ್ದನ್ನು ಅಸಾಧ್ಯವೆನ್ನುವ, ಒಮ್ಮೆ ಇಟ್ಟ ಆಣೆಗಳ ಬಲದಲ್ಲಿ, ನನ್ನ ಇಡೀ ಬದುಕಿನ ಪ್ರೀತಿಯನ್ನು ಕೊಂಡುಕೊಂಡಂತೆ ನಿಶ್ಚಿಂತನಾದ ಇವನ ನಿಲುವಿನ ಬಗ್ಗೆಯೇ ಕೋಪ ಕುದಿಯುತ್ತದೆ. ಜ್ವಾಲಾಮುಖಿಯಾಗಿ.

ನಿಜ. ಪ್ರೀತಿಯಲ್ಲಿ ತಪ್ಪಿದವಳು ನಾನೇ, ಆದರೇಕೋ ನನ್ನ ನಿಷ್ಠೆಯನ್ನು ಉಳಿಸಿಕೊಳ್ಳದಿದ್ದು, ಕಾಯ್ದುಕೊಳ್ಳದ್ದು, ರವಿಯ ಸೋಲು ಎನಿಸುತ್ತೆ. ಅವನು ನನ್ನ ಕಾಡಿಸಬೇಕಿತ್ತು, ಪೀಡಿಸಬೇಕಿತ್ತು, ಎದೆ–ಮಿದುಳುಗಳ ತಟ್ಟಬೇಕಿತ್ತು, ಗೆಲ್ಲಬೇಕಿತ್ತು... ಹೇಗಾದರೂ ಸರಿ. ನನಗಾಗಿ, ನನ್ನ ಪ್ರೀತಿಗಾಗಿ ಅವನು ಒಂದಿಷ್ಟು ಪರಿಶ್ರಮಪಡಬೇಕಿತ್ತು. ನನ್ನೆಲ್ಲ ಭಾವನೆಗಳಲ್ಲಿ ಅಜಗಜಾಂತರ ವ್ಯತ್ಯಾಸವಾಗಿದ್ದರೂ ರವಿ ಮಾತ್ರ ಇನ್ನೂ ಅಂದಿನ ಕನಸು ನನಸಾಗುವ ಭರವಸೆಯಲ್ಲಿ ಕುಳಿತಿದ್ದಾನೆ. ಪ್ರೀತಿ ಮುಷ್ಟಿಯಲ್ಲಿ ನಿಶ್ಚಿತಾರ್ಥದ ಉಂಗುರವಿಟ್ಟುಕೊಂಡು ಬೊಗಸೆಯಲ್ಲಿ ಹಿಡಿದಿಡುವುದಲ್ಲ ಹುಡುಗ, ಬೆರಳ ಸಂದಿಯಲ್ಲಿ ಅದು ಸೋರಿ ಹೋಗುವುದು.